3. ಅಸಲುಗಳನ್ನ ತರಿಸದೇ ಇರಕೂಡದೆಂತಲೇ ಆಗಲೀ, ಅಥವಾ ಅನ್ಯಗಳನ್ನ ಯಾತಕ್ಕೋಸ್ಕರ ತರಿಸಬೇಕಾಯಿತೋ ಆ ಉದ್ದೇಶವು ಕಾಪಿಗಳನ್ನ ಅಥವಾ ಎಕ್‌ಸ್ಟ್ರಾಕ್ಟ್‌ಗಳನ್ನ ಹಾಜರ್ಮಾಡಿದ್ದರಿಂದ ಸಫಲವಾಗಿ ನೆರವೇರುವದಿಲ್ಲವೆಂತಲೇ ಆಗಲೀ ಸ್ಥಾಪನೆಯಾಗುವ ಸಂದರ್ಭಗಳಲ್ಲಿ ಮಾತ್ರವೇ ಅಸಲ್ ರಿಜಿಸ್ಟರು ಮುಂತಾದವುಗಳನ್ನ ತರಿಸಬೇಕು.

ಸಿವಿಲ್ ತರಫ್.

ಸ್ಯ 1887ನೇ ಇಸವಿ ನವಂಬರು 10ನೇ ತಾರೀಖಿನ 69ನೇ ನಂಬರ್ ರೂಲ್ ಆಫ್ ಪ್ರಾಕ್ಟೀಸ್,

ಪೋಲೀಸ್ ಸ್ಟೇಷ್ಯಗಳಲ್ಲಿ ಇಡುವ ಅಸಲ್ ಡೈರೀಗಳನ್ನು ಮತ್ತು ಇತರ ರಿಜಿಸ್ಟರುಗಳನ್ನು ಸಿವಿಲ್ ಕೋರ್ಟುಗಳ ಮುಂದೆ ಹಾಜರ್ಮಾಡುವಬಗ್ಗೆ ತೆಗದುಕೊಂಡು ಹೋಗೋಣದರಿಂದ ಪೋಲೀಸ್ ಕೆಲಸಗಳನ್ನ ನಡಿಸುವದರಲ್ಲಿ ಕೇವಲ ಅನಾನುಕೂಲ್ಯ ಉಂಟಾದೀತೆಂತ ಪೋಲೀಸ್ ಇನ್‌ಸ್ಪೆಕ್ಟರ್ ಜನರಲ್ ಸಾಹೇಬರವರು ತಿಳಿಯಪಡಿಸಿದ್ದರಿಂದ, ಜೇಷ್ಠ ಕೋರ್ಟಿನವರು ಆಜ್ಞಾಪಿಸುವದೇನಂದರೆ,—ನ್ಯಾಯ ವಿಮರ್ಶೆಬಗ್ಗೆ ಸದರೀ ಡೈರೀಗಳಲ್ಲಿ ಅಥವಾ ರಿಜಿಸ್ಟರುಗಳಲ್ಲಿ ಬರೆದಿರುವ ಅಂಶಗಳನ್ನ ನೋಡತಕ್ಕದ್ದು ಅವಶ್ಯವೆಂತ ಸಿವಿಲ್ ಕೋರ್ಟಿಗೆ ತೋರುವಾಗ್ಯೆ, ಇಂಡಿಯನ್ ಎವಿಡೆನ್ಸ್ ಆಕ್ಟಿನ ನಿಬಂಧನೆಗಳಿಗೆ ಬಳಪಟ್ಟರುವಂತೆ, ಅಂಥಾ ಡೈರೀಗಳ ಅಥವಾ ರಿಜಿಸ್ಟರುಗಳ ಸ್ಯೆವೊಹರಾದ ಕಾಪಿಯನ್ನಾಗಲೀ ಅಥವಾ ಅವುಗಳ ಎಕ್‌ಸ್ಟ್ರಾಕ್ಟ್ ಎಂಬ ವೊಂದು ಭಾಗವನ್ನಾಗಲೀ ಹಾಜರ್ಮಾಡಬೇಕೆಂದು, ಅಥವಾ ಹಾಜರ್ಮಾಡಿಸಬೇಕೆಂದು, ಇಂಥಾ ಕಾಗದಗಳನ್ನ ಸುಫರ್ದಿನಲ್ಲಿ ಇಟ್ಟುಕೊಂಡಿರುವ ಪೋಲೀಸ್ ಆಫೀಸರನಿಗೆ ಸರ್ಮ ಕೊಡಬಹುದು. ಸದರೀ ಆಫೀಸರನಿಗೆ ವೇಲ್ಪಟ್ಟ ಡೆಪ್ಯುಟಿ ಕಮ್ಮಿಷನರ್ ಅಥವಾ ಪೋಲೀಸ್ ಅಸಿಸ್ಟೆಂಟ್ ಕಮ್ಮಿಷನರ ಮಾರೀಫತ್ತು ಅಂಥಾ ಸಮನನ್ನ ಕಳುಹಿಸಬೇಕು.

2. ಅಸಲುಗಳನ್ನ ತರಿಸದೇ ಇರಕೂಡದೆಂತಲೇ ಆಗಲೀ ಅಥವಾ ಯಾತಕ್ಕೋಸ್ಕರ ಅವುಗಳನ್ನ ತರಿಸಬೇಕಾಯಿತೋ ಆ ಉದ್ದೇಶವು ಕಾಪಿಗಳನ್ನ ಅಥವಾ ಎಕ್‌ಸ್ಟ್ರಾಕ್ಟ್‌ಗಳನ್ನ ಹಾಜರ್ಮಾಡಿದ್ದರಿಂದ ಸಫಲವಾಗಿ ನೆರವೇರುವದಿಲ್ಲವೆಂತಲೇ ಆಗಲೀ ಸ್ಥಾಪನೆಯಾಗುವ ಸಂದರ್ಭಗಳಲ್ಲಿ ಮಾತ್ರವೇ ಅಸಲ್ ರೆಜಿಸ್ಟರ್ ಮುಂತಾದವುಗಳನ್ನ ತರಿಸಬೇಕು.

" ಕೋರ್ಟಿನ ಹುಕುಂ ಪ್ರಕಾರ "

ಎಲ್. ಅನಂತ ಸ್ವಾಮಿರಾವ್,

ರೆಜಿಸ್ಟ್ರಾರ್.

ಇನಾಂ ಇಲಾಖಾ.

ನಂ. 1. ತಾರೀಖು 19ನೇ ನವಂಬರು 1887.

ಇನಾಂದಾರರಿಗೆ ಯಿದರಿಂದ ತಿಳಿಸುವದೇನಂದರೆ, ಲೇಟು ದೊಡ್ಡೇರಿ (ಹಾಲಿಚಕ್ಕಳಕೆರೆ) ತಾಲ್ಲೂಕಿನಲ್ಲಿ ಯಿರತಕ್ಕ ಚಿಲ್ಲರೆ ಇನಾಂಗಳ ಬಾಬತು 136 ಫೈನಲ್‌ಟೈಟಲ್‌ಡೀಡ್ಸು ಯಾನೆ ಖಾಯಂ ಪಟ್ಟೇಗಳು ಚಿತ್ರದುರ್ಗ ಡಿಸ್ಟ್ರಿಕ್ಟು ಡೆಪ್ಯೂಟಿ ಕಮ್ಮಿಷನರವರಿಗೆ ಬಟವಾಡೇ ಬಗ್ಗೆ ಈ ತಾರೀಖಿನಲ್ಲಿ ಕಳುಹಿಸಲ್ಪಟ್ಟವು.

2. ಸದರೀ ತಾಲ್ಲೂಕಿನ ಅಮಲ್‌ದಾರ್ರಿಂದ ಪ್ರತ್ಯೇಕ ಪ್ರತ್ಯೇಕ ನೋಟೀಸ್ ಬಂದ ಮೇಲೆ ಆವುಗಳನ್ನು ತೆಗದುಕೊಳ್ಳುವ ಬಗ್ಗೆ ಸದರೀ ಇನಾಂದಾರರು ಐರ್ಜ್ ಪ್ರಕಾರ ಹಾಜರಾಗತಕ್ಕದ್ದು. ಸದರೀ ತಾಲ್ಲೂಕಿನ ಅಮಲ್‌ದಾರ್ರು ಅಂಥಾ ನೋಟೀಸ್‌ಗಳನ್ನು ದೇರ್‌ಮಾಡದೆ, ಕೊಡತಕ್ಕದ್ದೆಂದು ಇದರಿಂದ ನಿಯಮಿಸಲ್ಪಟ್ಟಿರುತ್ತಾರೆ.

3. ಸದರೀ ಮೇಲ್ಕಂಡ ಚಿಲ್ಲರೆ ಯಿನಾಂಗಳ ಬಗ್ಯೆ ಸ್ 1881ನೇ ಇಸವಿ ಡಿಶಂಬರ್ 6ನೇ ತಾರೀಖಿನ 21ನೇ ನಂಬರು ಇಸ್ತಿಹಾರುನಾವೇ ಪ್ರಕಾರ ಕೊಡಲ್ಪಟ್ಟ ಪಟ್ಟೇಗಳು ರದ್ದು ಮಾಡಲ್ಪಟ್ಟಿರುತ್ತೆಂದು ಇದರ ದೆಶೆಯಿಂದ ಪ್ರಕಟಿಸಲ್ಪಡುತ್ತೆ.

ನಂ. 2. ತಾರೀಖು 23ನೇ ನವೆಂಬರ್ 1887ನೇ ಇಸವಿ.

ಇನಾಂದಾರರಿಗೆ ಯಿದರಿಂದ ತಿಳಿಸುವದೇನಂದರೆ, ಚಾಮರಾಜನಗರ ಮತ್ತು ಮೊಳಕಾಲ್ ಮುರು ತಾಲ್ಲೂಕುಗಳಲ್ಲಿ ಯಿರತಕ್ಕ ಚಿಲ್ಲರೆ ಇನಾಂಗಳ ಬಾಬತು 144 ಫೈನಲ್‌ಟೈಟಿಲ್‌ಡೀಡ್ಡು ಯಾನೆ ಖಾಯಂ ಪಟ್ಟೆಗಳು ಮೈಸೂರು ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟುಗಳ ಡೆಪ್ಯುಟಿ ಕಮ್ಮಿಷನರವರಗಳಿಗೆ ಬಟವಾಡೇ ಬಗ್ಯೆ ಈ ತಾರೀಖಿನಲ್ಲಿ ಕಳುಹಿಸಲ್ಪಟ್ಟವು.

2. ಸದರೀ ತಾಲ್ಲೂಕುಗಳ ಅಮಲ್‌ದಾರ್‌ಗಳಿಂದ ಪ್ರತ್ಯೇಕ ಪ್ರತ್ಯೇಕ ನೋಟೀಸ್ ಬಂದ ಮೇಲೆ ಅವುಗಳನ್ನು ತೆಗದುಕೊಳ್ಳುವ ಬಗ್ಯೆ ಸದರೀ ಯಿನಾಂದಾರರು ಐರ್ಜ ಪ್ರಕಾರ ಹಾಜರಾಗತಕ್ಕದ್ದು. ಸದರೀ ತಾಲ್ಲೂಕುಗಳ ಅಮಲ್‌ದಾರ್‌ಗಳು ಅಂಥಾ ನೋಟೀಸುಗಳನ್ನು ದೇರ್‌ಮಾಡದೆ ಕೊಡತಕ್ಕದ್ದೆಂದು ಇದರಿಂದ ನಿಯಮಿಸಲ್ಪಟ್ಟಿರುತ್ತಾರೆ.

3. ಸದರೀ ಮೇಲ್ಕಂಡ ಚಿಲ್ಲರೆ ಇನಾಂಗಳ ಬಗ್ಯೆ ಮೊದಲೇ ಈ ಆಫಿಸಿನ 1881ನೇ ಇಸವಿ ಆಕ್ಟೋಬರು 28ನೇ ತಾರೀಖಿನ 17ನೇ ನಂಬರು ಮತ್ತು ಡಿಶಂಬರು 13ನೇ ತಾರೀಖಿನ 22ನೇ ನಂಬರು ಇಸ್ತಿಹಾರ್‌ನಾಮೆಗಳ ಪ್ರಕಾರ ಕೊಡಲ್ಪಟ್ಟ ಟೈಟಿಲ್‌ಡೀಡ್ಡುಗಳು ರದ್ದುಮಾಡಲ್ಪಟ್ಟಿರುತ್ತೆಂದು ಇದರ ದೆಸೆಯಿಂದ ಪ್ರಕಟಿಸಲ್ಪಡುತ್ತೆ.

ಜೆ. ಪಿ. ಗ್ರಾಂಟ್,
ಸೂಪರ್‌ಟೆಂಡೆಂಟ್ ಆಫ್ ಇನಾಂ ಸೆಟ್ಲ್‌ಮೆಂಟ್.

ಬೆಂಗಳೂರು ಡಿಸ್ಟ್ರಿಕ್ಟು.

ಬೆಂಗಳೂರು ಸಬ್ ಜಡ್ಜಿಯವರ ಕೋರ್ಟಿನಲ್ಲಿ.

ದಿವಾಳೀಯಾದ ಡಿಕ್ರೀ ದೇಣೇದಾರ ಬೆಂಗಳೂರು ಪೆಪ್ಪೇರಪಳ್ಳೀಲಿರುವ ತಿಪ್ಪರಾಜು ವಿಷಯದಲ್ಲಿ—

ಸ್ 1887ನೇ ಇಸವಿ ದಿವಾಳೀ ಕೇಸ್ ನಂಬರ್ 843.

ಹುಕ್ಕುಂ.

ಮೇಲ್ಕಂಡ ತಿಪ್ಪರಾಜನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಕವು ಸಬ್ ಜಡ್ಜಿಯವರಾದ ಮೆ|| ಸಿ. ಕ್ರೈಸ್ ಸಾಹೇಬರವರ ರೂಬರೂ ಅರ್ಜೀದಾರನಾಡ ತಿಪ್ಪರಾಜನ್ನ ಕುದ್ದಾಗಿಯೂ ಮತ್ತು ಸದರೀಯವನ ಲೇಣೇದಾರ್‌ರಾದ 3ನೇ ಸುಬ್ಬರಾಜನಿಗೂ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತೀ ನೋಟೀಸ್ ಜಾರೀಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ, 1—2ನೇ ಯವರು.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ತಿಪ್ಪರಾಜು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳೀಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳೀಯಾದವನ್ನ ನಿರ್ಬಂಧದಿಂದ ವಿಮೋಚನೇ ಮಾಡಿರುವದಲ್ಲದೇ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೂ ಸ್ವತರವಾಗಿಯಾಗಲಿ ದಸ್ತಗೀರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ ದಾರೀಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆಯಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸ್ 1887ನೇ ಇಸವಿ ಅಕ್ಟೋಬರ್ 28ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್‌ನಿನಿ ಕೊಡಲ್ಪಟ್ಟಿತು.